ಕರ್ನಾಟಕ ಸರ್ಕಾರ

ಸಂ:ಮಮಇ 202 ಮಭಾಬ 2017(ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ:30.11.2017

## ಅಧಿಸೂಚನೆ

ದಿನಾಂಕ:26.09.2017ರ ಸರ್ಕಾರಿ ಅಧಿಸೂಚನೆ-1 ಮತ್ತು 2 ಸಂಖ್ಯೆ:ಮಮಇ 202 ಮಭಾಬ 2017ರಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಮೂರು ವರ್ಷಗಳ ಅವಧಿಗೆ ನೇಮಕಾತಿ ಮಾಡಲಾಗಿರುತ್ತದೆ. ಸದರಿ ಅಧಿಸೂಚನೆ-1ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಅಧಿಸೂಚನೆ-2ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಾಲನ್ಯಾಯ ಮಂಡಳಿಗೆ ಅರ್ಹ ಸದಸ್ಯರುಗಳನ್ನು ಹಾಗೂ ರಾಮನಗರ ಜಿಲ್ಲೆಯ ಬಾಲನ್ಯಾಯ ಮಂಡಳಿಗೆ ಮಹಿಳಾ ಸದಸ್ಯರನ್ನು ಆಯ್ಕೆ ಮಾಡಿರುವುದಿಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ, ಅಧ್ಯಕ್ಷರು ಮತ್ತು ಸದಸ್ಯರುಗಳ ಕಾರ್ಯಾವಧಿಯನ್ನು ನವೆಂಬರ್ 2017ರವರೆಗೆ ಮುಂದುವರೆಸುವ ಬಗ್ಗೆ ದಿನಾಂಕ:06.10.2017ರ ಅಧಿಸೂಚನೆ ಸಂಖ್ಯೆ:ಮಮಇ 202 ಮಭಾಬ 2017ರಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಜಿಲ್ಲೆಗಳ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳ ಕಾರ್ಯಾವಧಿಯು ನವೆಂಬರ್ 2017ರ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯಿದೆ, 2015 ಕಲಂ 27(1), (2) ಹಾಗೂ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕೇಂದ್ರ ಸರ್ಕಾರದ ಮಾದರಿ ನಿಯಮಗಳು 2016ರ ನಿಯಮ 15ರನ್ವಯ ಈ ಕೆಳಕಂಡ ಜಿಲ್ಲೆಗಳಿಗೆ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಲಾಗಿದೆ.

| ಕ್ರ.ಸ | ಜಿಲ್ಲೆ | ಆಯ್ಕೆಯಾದ ಸದಸ್ಯರ ಹೆಸರು | ವಿಳಾಸ | ಹುದ್ದೆ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶ್ರೀ. ಹೆಚ್ ರಾಮ ಮಲ್ಲಯ್ಯ | ನಂ 164/1, ಮೊದಲನೇ ಮಹಡಿ, ರಾಜೀವ್ ಗಾಂಧಿನಗರ, (ನ್ಯೂ ಸಿವಿಲ್ ಕೋರ್ಟ್ ಹಿಂಭಾಗ) ಸೊಂಡೇಕೊಪ್ಪ ರಸ್ತೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-576123 | ಅಧ್ಯಕ್ಷರು |
| | | ಶ್ರೀಮತಿ ಭಾರತಿ ಎಸ್ | ನಂ.30, 21ನೇ ಮುಖ್ಯ ರಸ್ತೆ, ಡಿ ಪೈಪ್ ಲೈನ್ ಕ್ರಾಸ್ ರೋಡ್, ಜೆ.ಸಿ.ನಗರ, ಬೆಂಗಳೂರು-86 | ಸದಸ್ಯರು |
| | | ಶ್ರೀ. ಟಿ. ಬಸವರಾಜ್ ನಾಯ್ಕ | 4ನೇ ವಾರ್ಡ್, ಕೋರ್ಟ್ ರಸ್ತೆ, ದೊಡ್ಡಬಳ್ಳಾಪುರ - 561203 | ಸದಸ್ಯರು |
| | | ಶ್ರೀ. ಮುತ್ತುರಾಜ ಸಿ | ಬಿನ್ /ವೆಂಕಟರಮಣಯ್ಯ ಜಕ್ಕಸಂದ್ರ ರಸ್ತೆ, ಕನಕಪುರ ತಾ, ರಾಮನಗರ - 562112 | ಸದಸ್ಯರು |
| | | ಶ್ರೀ. ಮುಸ್ತಫಾ ಖಾನ್ | ನಂ.48, ಮರಿಯಮ್ಮ ಕೋಯಿಲ್ ರಸ್ತೆ, ನೀಲಸಂದ್ರ, ಬೆಂಗಳೂರು - 560047 | ಸದಸ್ಯರು |

1.12.18

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯಿದೆ, 2015, ಸೆಕ್ಷನ್ 4(2) (3)ರಂತೆ ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕೇಂದ್ರ ಸರ್ಕಾರದ ಮಾದರಿ ನಿಯಮಗಳು 2016ರ ನಿಯಮ 4(1)ರನ್ವಯ ಈ ಕೆಳಕಂಡ ಜಿಲ್ಲೆಗಳಿಗೆ ಬಾಲನ್ಯಾಯ ಮಂಡಳಿಗಳಿಗೆ ಸಮಾಜ ಕಾರ್ಯಕರ್ತ ಸದಸ್ಯರನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಲಾಗಿದೆ.

| ಕ್ರಸ | ಜಿಲ್ಲೆ | ಆಯ್ಕೆಯಾದ ಸದಸ್ಯರ ಹೆಸರು | ವಿಳಾಸ | ಹುದ್ದೆ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶ್ರೀ. ಚೇತನ್ ಅಭಿನೇಂದ್ರ ಕುಮಾರ್ | ನಂ.26-10, 2ನೇ ಮಹಡಿ, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-19 | ಸಮಾಜ ಕಾರ್ಯಕರ್ತರು |
| | | ಶ್ರೀಮತಿ. ಹೇಮಲತ ಹೆಚ್.ಎನ್ | 5/1, 1ನೇ ಅಡ್ಡ ರಸ್ತೆ, ದ್ವಾರಕಾನಗರ, ಚಂದ್ರಲೇಔಟ್, ಬೆಂಗಳೂರು-560072 | ಸಮಾಜ ಕಾರ್ಯಕರ್ತರು |
| 2 | ರಾಮನಗರ ಜಿಲ್ಲೆ | ಶ್ರೀಮತಿ. ಗಂಗರತ್ನಮ್ಮ | ಕೋಂ ಲೋಕೇಶ್, ಬಿ.ಎನ್, ಧನುಷ್ ನಿಲಯ, ವಿದ್ಯಾಪೀಠ ಶಾಲೆಯ ಹಿಂಭಾಗ, ಐಜೂರು, ರಾಮನಗರ | ಸಮಾಜ ಕಾರ್ಯಕರ್ತರು |

ದಿನಾಂಕ: 26.09.2017ರ ಅಧಿಸೂಚನೆ- 1 ಮತ್ತು 2 ಸಂಖ್ಯೆ:ಮಮಇ 202 ಮಭಾಬ 2017ರ ಅನುಬಂಧದಲ್ಲಿ ವಿವರಿಸಿರುವಂತೆ ಮೇಲಿನ ಸಮಿತಿಗಳ ಅಧ್ಯಕ್ಷರು, ಸದಸ್ಯರು ಮತ್ತು ಸಮಾಜ ಕಾರ್ಯಕರ್ತರ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸುವ ಷರತ್ತಿಗೊಳಪಟ್ಟಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 300 ಪ್ರತಿಯನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
2. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬಹುಮಹಡಿ ಕಟ್ಟಡ, ಬೆಂಗಳೂರು.

3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5. ಸಂಬಂಧಪಟ್ಟ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು.
6. ಸಂಬಂಧಪಟ್ಟ ಬಾಲನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು.
7. ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
8. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ.

(5–8) ಸದಸ್ಯ ಕಾರ್ಯದರ್ಶಿಯವರ ಮುಖಾಂತರ

**ಪ್ರತಿಯನ್ನು ಮಾಹಿತಿಗಾಗಿ:-**

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.